<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>

**ಸಿಸಿ ನಂ. 1049/2022**

| | | | |
|---|---|---|---|
| **ಹೆಸರು** | : | **ವಿಜಯಕುಮಾರ** | **ಚಾ.ಸಾ.1** |
| **ತಂದೆಯ ಹೆಸರು** | : | **ಸಿದ್ದಯ್ಯ ಸ್ವಾಮಿ** | **ಪ್ರಾ.ಸಾ.2** |
| **ವಯಸ್ಸು** | : | **38 ವರ್ಷ** | **ದಿನಾಂಕಃ 15-05-2024** |
| **ಉದ್ಯೋಗ** | : | **ಒಕ್ಕಲುತನ** | |
| **ವಾಸಸ್ಥಳ** | : | **ಬೇಡಕಪಳ್ಳಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಪ್ರಾಸಾ-1, ಚಾಸಾ-4 ರವರು ನನಗೆ ಗೊತ್ತು. ಚಾಸಾ-5 ಮತ್ತು 7 ನನ್ನ ಅಣ್ಣಂದಿರು. ಚಾಸಾ-6 ನನ್ನ ಅಣ್ಣನ ಮಗಳು. ಚಾಸಾ-8 ನನ್ನ ಅತ್ತಿಗೆ. ಚಾಸಾ-9 ನನ್ನ ಹೆಂಡತಿ. ಚಾಸಾ-10 ನನ್ನ ಭಾವ. ಮೃತ ಶ್ರೀಕಾಂತ ನನ್ನ ಮಗ.

ಈಗ 2 ವರ್ಷಗಳ ಹಿಂದೆ ಸಂಜೆ 7.30 ಗಂಟೆ ಸುಮಾರಿಗೆ ಸುಲೇಪೇಟನಿಂದ ಬೇಡಕಪಳ್ಳಿ ಗ್ರಾಮಕ್ಕೆ ನಾನು, ನನ್ನ ಮಗ, ಚಾಸಾ-5, ಚಾಸಾ-6 ರವರು ನನ್ನ ಆಟೋ ಸಂಖ್ಯೆಯಾದ 3434 ರಲ್ಲಿ ಹೋಗುತ್ತಿದ್ದಾಗ ಸುಲೇಪೇಟದಲ್ಲಿರುವ ದೇಸಾಯಿ ದಾಬಾ ಹತ್ತಿರ ಸೇಡಂ ಕಡೆಯಿಂದ ಲಾರಿ ವೇಗವಾಗಿ ಬಂದು ನನ್ನ ವಾಹನಕ್ಕೆ ಕಟ್ ಹೋಡೆದಿರುತ್ತಾನೆ. ಆಗ ಆಟೋ ನಾನು ಚಲಿಸುತಿದ್ದು ನನ್ನ ಪಕ್ಕದಲ್ಲಿ ನನ್ನ ಮಗ ಕುಳಿತಿದ್ದ. ಆಟೊವಿನ ಹಿಂದೆ ಚಾಸಾ-5 ಮತ್ತು 6 ರವರು ಕುಳಿತಿದ್ದರು.

ಸದರಿ ಲಾರಿ ನನ್ನ ಮಗನಿಗೆ ಡಿಕ್ಕಿ ಮಾಡಿದ ಕಾರಣ ನನ್ನ ಆಟೊ ಪಲ್ಟಿಯಾಗಿರುತ್ತದೆ ಮತ್ತು ನನ್ನ ಮಗ ಲಾರಿಯಲ್ಲಿ ಸಿಲುಕಿರುತ್ತಾನೆ. ಘಟನೆಯ ಕಾರಣ ನನ್ನ ಮಗನಿಗೆ ತಲೆಗೆ ಹಾಗೂ ದೇಹದ ಎಲ್ಲಾ ಭಾಗದಲ್ಲಿ ಗಾಯಗಳಾಗಿದ್ದವು. ದಾಬಾದಲ್ಲಿ ಇರುವವರು ಆಂಬ್ಯುಲೇನ್ಸಗೆ ಕರೆಮಾಡಿದಾಗ ನನ್ನ ಮಗನಿಗೆ ಸುಲೇಪೇಟ ಸರಕಾರಿ ಆಸ್ಪತ್ರೆಗೆ ಆಂಬ್ಯುಲೇನ್ಸನಲ್ಲಿ ಕರೆದುಕೊಂಡು ಹೋಗಿರುತ್ತೇವೆ. ಸುಲೇಪೇಟದಲ್ಲಿ ಚಿಂಚೋಳಿ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದ ಕಾರಣ ಚಿಂಚೋಳಿ ಸರಕಾರಿ ಆಸ್ಪತ್ರೆಗೆ ನನ್ನ ಮಗನಿಗೆ ಕರೆದುಕೊಂಡು ಬಂದಿರುತ್ತೇವೆ. ಸದರಿ ಚಿಂಚೋಳಿ ಆಸ್ಪತ್ರೆಯಲ್ಲಿ ನನ್ನ ಮಗ ಮೃತಪಟ್ಟಿರುತ್ತಾನೆ.

ಚಾಸಾ-5 ರವರ ತಲೆಗೆ ಮತ್ತು ಮೊಳಕಾಲಿಗೆ ಬಾರಿ ಗಾಯಗಳಾಗಿದ್ದವು. ಚಾಸಾ-6 ರವರಿಗೆ ಸಹ ಗಾಯಗಳಾಗಿದ್ದವು. ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿದೆ. ಆದ್ದರಿಂದ ನಾನು ದೂರನ್ನು

ನೀಡಿದ್ದೇನೆ. ಈಗ ನೋಡುತ್ತಿರುವ ದೂರು ನಾನೇ ನೀಡಿದ್ದು ಮತ್ತು ಅದರಲ್ಲಿರುವ ಸಹಿ ನನ್ನದೆ. ನನ್ನ ದೂರನ್ನು ನಿಪಿ-10 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಆಟೋ ನನ್ನದಾಗಿರುತ್ತದೆ ಮತ್ತು ಅಪಘಾತಕ್ಕಿಡಾದ ಆಟೋ ಆಗಿದೆ. ಸದರಿ ಭಾವಚಿತ್ರಗಳನ್ನು ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಇನ್ನೊಂದು ಭಾವಚಿತ್ರದಲ್ಲಿ ಜಕ್ಕಂ ಆದ ಆಟೋ ನನ್ನದೆ. ಸದರಿ ಭಾವಚಿತ್ರವನ್ನು ನಿಪಿ-13 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ನಿಪಿ-7 ರಲ್ಲಿರುವ ಭಾವಚಿತ್ರದಲ್ಲಿ ನನ್ನ ಆಟೋ ಇದೆ.

ಲಾರಿ ಚಾಲಕನನ್ನು ಗುರುತಿಸಲು ಆಗುವುದಿಲ್ಲ. ಈಗ ನೋಡುತ್ತಿರುವ ನಿಪಿ-7 ರಲ್ಲಿರುವ ಲಾರಿ ನಮಗೆ ಡಿಕ್ಕಿ ಪಡಿಸಿದ ಲಾರಿಯಾಗಿದೆ. ಪೋಲಿಸ ಠಾಣೆಯಲ್ಲಿ ಸೂರ್ಯಕಾಂತರವರು ಬಂದಾಗ ಅವರೇ ಲಾರಿ ಚಲಾಯಿಸುತ್ತಿದ್ದರು ಎಂದು ತಿಳಿಸಿದ್ದಾರೆ. ನಿಪಿ-5 ರ ಭಾವಚಿತ್ರದಲ್ಲಿ ನಾನು ಇದ್ದೇನೆ. ನಿಪಿ-5 ರ ಭಾವಚಿತ್ರವನ್ನು ಅಪಘಾತವಾದ ಸ್ಥಳದಲ್ಲಿ ಪಡೆದಿದ್ದಾರೆ. ಈಗ ನೋಡುತ್ತಿರುವ ನಿಪಿ-4 ರ ದಾಖಲೆಯಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಪಘಾತವಾದ ಸ್ಥಳದಲ್ಲಿ ಮಾಡಿದ್ದೇನೆ.

ಸೂರ್ಯಕಾಂತರವರಿಗೆ ನೋಡಿದರೆ ಗುರುತಿಸಲು ಆಗುವುದಿಲ್ಲ. ಅಪಘಾತ ಪಡಿಸಿದ ಲಾರಿ ಸಂಖ್ಯೆ ನನಗೆ ಹೇಳಲು ಬರುವುದಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ದೂರಿಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-</u>

ಅಪಘಾತದ ಬಗ್ಗೆ ನನ್ನ ಭಾವನಾದ ಚಾಸಾ-10 ರವರಿಗೆ ನಾನು ತಿಳಿಸಿದ್ದೇನೆ ಹಾಗೂ ಅವರು ದೂರನ್ನು ಬರೆದಿದ್ದಾರೆ ಎಂದರೆ ಸರಿ. ಅಪಘಾತವಾದ ಮರುದಿನ ಠಾಣೆಗೆ ಹೋಗಿ ದೂರನ್ನು ನೀಡಿದ್ದೇನೆ ಎಂದರೆ ಸರಿ. ಡಿಕ್ಕಿ ಪಡಿಸಿದ ವ್ಯಕ್ತಿಯನ್ನು ಗುರುತಿಸುತ್ತೇನೆ ಎಂದರೆ ಸರಿ. ( ಆರೋಪಿಯನ್ನು ಗುರುತಿಸಲು ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ).

<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಹೆಚ್.ಹೆಚ್ ವಕೀಲರಿಂದಃ-</u>

ನಾನು ವಿದ್ಯಾಭ್ಯಾಸ ಮಾಡಿಲ್ಲ. ಸಾಮಾನ್ಯವಾಗಿ ಸಾಯಂಕಾಲ 6 ಗಂಟೆಗೆ ನಾನು ಹೋದ

ಜಾತ್ರೆ ತೇರು ಎಳೆಯುತ್ತಾರೆ ಎಂದರೆ ಸರಿ. ತೇರು ಎಳೆದ 10-15 ನಿಮಿಷಗಳಾದ ನಂತರ ಜನರು ಅವರವರ ಊರಿಗೆ ಮರಳಿ ಹೋಗುತ್ತಾರೆ ಎಂದರೆ ಸರಿ. ಆ ದಿನ ನಾವು ಸಾಯಂಕಾಲ 7 ಗಂಟೆಗೆ ಮರಳಿ ಹೋರಟಿರುತ್ತೇವೆ. ತೇರಿನ ಸ್ಥಳಕ್ಕೆ ಹಾಗೂ ಅಪಘಾತವಾದ ಸ್ಥಳ 1 ಕಿ.ಮೀ. ದೂರದಲ್ಲಿ ಇದೆ ಎಂದರೆ ಸರಿ. 5 ನಿಮಿಷದಲ್ಲಿ ತೇರಿನ ಸ್ಥಳದಿಂದ ದಾಬಾ ದಾಟಿ ಹೋಗಬಹುದು ಎಂದರೆ ಸರಿ. ಸುಲೇಪೇಟದಿಂದ ನಮ್ಮ ಗ್ರಾಮ 8 ಕಿ.ಮೀ. ದೂರದಲ್ಲಿಇದೆ ಎಂದರೆ ಸರಿ. ಸಾಮಾನ್ಯವಾಗಿ ಸುಲೇಪೇಟದಿಂದ ಬೇಡಕಪಳ್ಳಿಗೆ ಹೋಗಲು 20 ರಿಂದ 25 ನಿಮಿಷ ಬೇಕಾಗುತ್ತದೆ ಎಂದರೆ ಸಾಕ್ಷಿ ಅರ್ಧ ಗಂಟೆಗಿಂತ ಜಾಸ್ತಿ ಬೇಕಾಗುತ್ತದೆ. ಸಾಕ್ಷಿ ಮುಂದುವರೆದು ರಸ್ತೆ ಸರಿ ಇಲ್ಲದಿರುವ ಕಾರಣ ಜಾಸ್ತಿ ಸಮಯ ಬೇಕಾಗುತ್ತದೆ ಎಂದು ನುಡಿಯುತ್ತಾರೆ.

ದಾಬಾದಿಂದ ಪೋಲಿಸರು ಠಾಣೆ 400-500 ಮೀಟರ ದೂರದಲ್ಲಿ ಇದೆ ಎಂದರೆ ಸರಿ. ಸುಲೇಪೇಟದಿಂದ ಬೇಡಕಪಳ್ಳಿಗೆ ಹೋಗಲು ಸುಲೇಪೇಟ ಪೋಲಿಸ ಠಾಣೆಯ ಮುಂದೆಯಿಂದ ಹೋಗಬೇಕು ಎಂದರೆ ಸರಿ. ಅಪಘಾತವಾದ ನಂತರ ಪೋಲಿಸ ಠಾಣೆಗೆ ಹೋಗಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಆಸ್ಪತ್ರೆಗೆ ಹೋಗಿದ್ದೇವೆ ಎಂದು ನುಡಿಯುತ್ತಾರೆ.

ಆಂಬ್ಯುಲೇನ್ಸ ಬಂದಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪಿಲ್ಲ. ಚಾಸಾ-7 ಮತ್ತು 8 ರವರು ಆಸ್ಪತ್ರೆಗೆ ಬಂದಿದ್ದರು. ಚಾಸಾ-7 ಮತ್ತು 8 ರವರಿಗೆ ನಾನು ಕರೆಮಾಡಿ ಘಟನೆ ಬಗ್ಗೆ ತಿಳಿಸಿದ್ದೇನೆ.

ಚಿಂಚೋಳಿ-ಸುಲೇಪೇಟ-ಸೇಡಂ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಚಲಿಸುತ್ತವೆ ಎಂದರೆ ಸರಿ. ಅಂದಾಜು 60 ರಿಂದ 100 ವಾಹನಗಳು 1 ಗಂಟೆಯಲ್ಲಿ ಸದರಿ ರಸ್ತೆಯಲ್ಲಿ ಓಡಾಡುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ದಾಬಾದಲ್ಲಿ ಊಟ ಮಾಡಲು ಲಾರಿ ಚಾಲಕರು ತಮ್ಮ ಲಾರಿಯನ್ನು ನಿಲ್ಲಿಸಿ ಊಟ ಮಾಡುತ್ತಾರೆ ಎಂದರೆ ಸರಿ.

ಅಪಘಾತವಾದ ಸಮಯಕ್ಕೆ ಕತ್ತಲು ಆಗಿತ್ತು ಎಂದರೆ ಸರಿ. ಕತ್ತಲು ಇದ್ದ ಕಾರಣ ವಾಹನ ಸಂಖ್ಯೆ ಕಾಣಿಸುವುದಿಲ್ಲ ಎಂದರೆ ಸರಿ. ಅಪಘಾತವಾದ ಸ್ಥಳದಲ್ಲಿ ಚಾಸಾ-10 ರವರು ಇರಲಿಲ್ಲ ಎಂದರೆ ಸರಿ. ಚಾಸಾ-10 ರವರು ಬರೆದಿದ್ದ ದಾಖಲೆ ಮೇಲೆ ನಾನು ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ನಾನು ಹೇಳಿದಂತೆ ಬರೆದಿದ್ದಾರೆ ಎಂದು ನುಡಿಯುತ್ತಾರೆ.

ಸುಲೇಪೇಟ ಆಸ್ಪತ್ರಯಲ್ಲಿ ಎಮ್.ಎಲ್.ಸಿ ದಾಖಲೆ ಆಗಿದೆಯಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸುಲೇಪೇಟ ಆಸ್ಪತ್ರೆಗೆ ಹೋದ ನಂತರ ಪೋಲಿಸ

ಠಾಣೆಗೆ ತಿಳಿಸಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಚಾಸಾ-7 ರವರು ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ಚಾಸಾ-7 ರವರು ತಿಳಿಸಿದ ನಂತರ ಪೋಲಿಸರು ಸುಲೇಪೇಟ ಆಸ್ಪತ್ರೆಗೆ ಬಂದಿದ್ದರು. ಸುಲೇಪೇಟ ಆಸ್ಪತ್ರೆಗೆ ಹೋದಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪಿಲ್ಲ. ಪೋಲಿಸರು ಸಾಯಂಕಾಲ 8 ಗಂಟೆಯ ಒಳಗಡೆ ಸುಲೇಪೇಟ ಆಸ್ಪತ್ರೆಗೆ ಬಂದಿದ್ದರು. ಸುಲೇಪೇಟ ಆಸ್ಪತ್ರೆಗೆ ಪೋಲಸರು ಬಂದಾಗ ನಾನಾಗಲಿ ನನ್ನ ಸಂಬಂಧಿಕರಾಗಲಿ ದೂರು ನೀಡಿದ ಬಗ್ಗೆ ನನಗೆ ನೆನಪಿಲ್ಲ.

ಚಿಂಚೋಳಿ ಸರಕಾರಿ ಆಸ್ಪತ್ರೆಗೆ ಬಂದಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪಿಲ್ಲ. ಪೋಲಿಸ ಠಾಣೆಗೆ ದೂರು ನೀಡಲು ಹೋದಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪಿಲ್ಲ. ದೂರು ನೀಡಲು ನಾನು ಮತ್ತು ಚಾಸಾ-7 ರವರು ಹೋಗಿದ್ದೇವು.

ನನ್ನ ವಾಹನದಲ್ಲಿ 3-4 ಜನರು ಹೋಗಬಹುದು. ಸಾಮಾನ್ಯವಾಗಿ ನನ್ನ ವಾಹನದಲ್ಲಿ ಚಾಲಕ ಬಿಟ್ಟು ಹಿಂದೆ 8 ಜನರು ಕೂಡಲು ಸ್ಥಳವಿದೆ ಎಂದರೆ ಸರಿ. ನಿಪಿ-11 ಮತ್ತು 12 ರಲ್ಲಿ ಇರುವಂತೆ ವಾಹನದ ಮಧ್ಯ ಭಾಗದಲ್ಲಿ 4 ಜನರು ಕುಳಿತು ಕೊಳ್ಳಲು ಸ್ಥಳವಿದೆ ಎಂದರೆ ಸರಿ. ಚಾಲಕನ ಸೀಟಿನಲ್ಲಿ ನಾನು ಮತ್ತು ನನ್ನ ಮಗ ಕುಳಿತಿದ್ದ ಕಾರಣ ನನ್ನ ನಿರ್ಲಕ್ಷ್ಯತನದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಲಾರಿ ನಮ್ಮ ವಾಹನಕ್ಕೆ ಡಿಕ್ಕಿ ಮಾಡಿ ಅಪಘಾತವಾಗಿದೆ ಎಂದು ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

ಸೇಡಂ-ಸುಲೇಪೇಟ ರಸ್ತೆಯಲ್ಲಿ ಒಟ್ಟಿಗೆ 2-3 ವಾಹನಗಳು ಓಡಾಡುವಷ್ಟು ಅಗಲವಿದೆ ಎಂದರೆ ಸರಿ. ಪಲ್ಟಿಯಾದ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಮತ್ತು ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸೂರ್ಯಕಾಂತನ ಹೆಸರು ಪೋಲಿಸರು ಹೇಳಿದಾಗ ಗೊತ್ತಾಗಿದೆ ಎಂದರೆ ಸರಿ. ಬೇರೆ ಯಾವುದೋ ವಾಹನ ನಮಗೆ ಡಿಕ್ಕಿ ಪಡಿಸಿದ್ದು ನನ್ನ ತಪ್ಪು ಮುಚ್ಚಿ ಹಾಕಲು ಅಲ್ಲಿನಿಂತ ವಾಹನದ ಮೇಲೆ ಸುಳ್ಳು ಪ್ರಕರಣವನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ನನ್ನ ಆಟೋ ನನ್ನ ಹೆಸರಿನಲ್ಲಿದೆ. ಪರಿಹಾರ ಹಣ ಪಡೆಯಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**